# ಆಹಾ ಸುದ್ದಿ!

★ ಸಸಿತೋಟ



ಬ್ಯಾಂಕಾಂಕ್‌ನಲ್ಲಿರುವ ಡೆತ್ ಕೆಫೆ 'ಕಿಡ್ ಮಾಯ್'ನಲ್ಲಿ ಹೀಗೊಂದು ಸಾವಿನ ಸಮೀಪದ ಅನುಭವ ಪಡೆಯಬಹುದಂತೆ. ಶವ ಪೆಟ್ಟಿಗೆಯಲ್ಲಿ ಮಲಗಿ ಡೆತ್, ಪೇಯ್ನ್‌ಫುಲ್.. ಹೀಗೆ ನಿಮಗೆ ಬೇಕಾದ ಪಾನೀಯಗಳಿಗೆ ಬೇಡಿಕೆ ಸಲ್ಲಿಸಿ ಬೇರೊಂದು ಲೋಕದ ಬಗ್ಗೆ ಆಲೋಚನೆ ಮಾಡುಬಹುದಂತೆ. ಸಾವಿನ ಕುರಿತ ಕಹಿ ಭಾವನೆಗಳ ಮಧ್ಯೆ ಪಾನೀಯದ ಕಹಿ ಅನುಭವಕ್ಕೆ ಬರದೇ ಇರಬಹುದು.

ಆಸ್ಟ್ರೇಲಿಯಾದಲ್ಲಿ ಡೇವಿಡ್ ಎಂಬಾತ ತಾನು ಈ ಮುಂಚೆ ಕೆಲಸ ಮಾಡುತ್ತಿದ್ದ ಕಂಪೆನಿಯ ಸೂಪರ್‌ವೈಸರ್ ಮೇಲೆ ಪ್ರಕರಣ ದಾಖಲಿಸಿದ್ದಾನೆ. ಆರೋಪವೇನೆಂದರೆ ಆ ಸೂಪರ್‌ವೈಸರ್ ಈತನ ಪಕ್ಕ ಕೂತು ನಿರಂತರ ಅಪಾನಾವಾಯು ಬಿಡುತ್ತಿದ್ದನಂತೆ. ಇದರಿಂದ ತಾನು ಖಿನ್ನತೆಗೆ ಒಳಗಾಗಿ ಕೆಲಸ ಬಿಡಬೇಕಾಯಿತು ಎಂಬುದು ಡೇವಿಡ್ ದೂರು. ಆದರೆ ಡೇವಿಡ್ ಈಗ ಸಾಕ್ಷಿಗಾಗಿ ಅಲೆಯುತ್ತಿದ್ದಾನಂತೆ.



ಇದು ಅಮೆರಿಕದ ಖ್ಯಾತ ಸಿಹಿ ಕ್ಯಾಂಡಿ ನೆಕೊ ವೇಫರ್ಸ್. ಮುಂದಿನ ತಿಂಗಳು ಕಂಪೆನಿ ಇದರ ಉತ್ಪಾದನೆ ಸ್ಥಗಿತಗೊಳಿಸಲಿದ್ದು, ಅಮೆರಿಕದಲ್ಲೀಗ ನೆಕೊ ವೇಫರ್ಸ್ ಪ್ಯಾನಿಕ್ ಶುರುವಾಗಿದೆಯಂತೆ. ಅಂದರೆ ಜನ ಮುಗಿಬಿದ್ದು ಇದನ್ನು ಖರೀದಿಸಿ ಸಂಗ್ರಹ ಹೆಚ್ಚಿಸಿಕೊಳ್ಳುತ್ತಿದ್ದಾರಂತೆ. ಕೇಟಿ ಸ್ಯಾಮ್ಯುಯೆಲ್ ಎಂಬಾಕೆಯಂತೂ ತನ್ನ ಹೋಂಡಾ ಅಕಾರ್ಡ್ ಕಾರನ್ನು ನೆಕೊ ಕಂಪೆನಿಗೆ ಮಾರಾಟ ಮಾಡಿ ಕ್ಯಾಂಡಿ ಖರೀದಿಗೆ ಹೊರಟಿದ್ದಾಳಂತೆ. ಹಳೆಯ ಸಂಗ್ರಹ ಖಾಲಿ ಮಾಡಲು ಉಪಾಯವಂತೂ ಸೂಪರ್.




ಮುಂಬಯಿಯ ರಸ್ತೆಗಳಲ್ಲಿ ಚಾಲಕರು ಗಂಟೆಗೆ 1.8 ಕೋಟಿ ಸಲ ಹಾರ್ನ್ ಹಾಕುತ್ತಾರಂತೆ. ಅಂದರೆ ಒಬ್ಬ ಚಾಲಕ ಸರಾಸರಿ 48 ಬಾರಿ ಹಾರ್ನ್ ಹೊಡೆಯುತ್ತಾನಂತೆ. ಈ ರೀತಿ ಹಾರ್ನ್ ಕೇಳುತ್ತ ಹೋದರೆ ಸಿಟ್ಟು, ಒತ್ತಡ ಜಾಸ್ತಿಯಾಗುತ್ತದೆ ಎಂದಿರುವ ಸ್ವಯಂ ಸೇವಾ ಸಂಸ್ಥೆಯೊಂದು ಹಾರ್ನ್‌ಗೆ ಉಪವಾಸ ಕೂರಿಸಿ ಎಂಬ ಅಭಿಯಾನ ಆರಂಭಿಸಿದೆ. ಮಂದಿಯ ಉಪವಾಸ ಸತ್ಯಾಗ್ರಹಕ್ಕಿಂತ ಇದು ಹೆಚ್ಚು ಗಮನ ಸೆಳೆದಿರಬಹುದು.



ಚೀನಾದ ವಾಹನ ಚಾಲನಾ ತರಬೇತಿ ಸಂಸ್ಥೆಯೊಂದು ವಿಚಿತ್ರ ರೀತಿಯ ತರಬೇತಿಯನ್ನು ಆರಂಭಿಸಿದೆ. ತರಬೇತಿಗೆ ಬಂದವರು ಹಳದಿ ರೇಖೆಯ ಮೇಲೆ ತಮ್ಮ ಮೊಬೈಲ್ ಫೋನ್‌ಗಳನ್ನು ಇಟ್ಟು ಎಚ್ಚರಿಕೆಯಿಂದ ವಾಹನ ಚಾಲನೆ ಮಾಡಬೇಕಂತೆ. ಚೂರು ಹೆಚ್ಚು ಕಡಿಮೆಯಾದರೂ ಅವರ ಮೊಬೈಲ್ ಚೂರು ಚೂರು. ಸೆಕೆಂಡ್ ಹ್ಯಾಂಡ್ ಫೋನ್ ಮಾರಾಟ ಮಾಡುವವರಿಗೆ ಡಿಮ್ಯಾಂಡಪ್ಪೋ ಡಿಮ್ಯಾಂಡ್.

ಅಮೆರಿಕದ ಸಣ್ಣ ಪಟ್ಟಣ ಅಲಬಾಮಾ ಕಳೆದ ಎರಡು ತಿಂಗಳಿಂದ ಅಕ್ಷರಶಃ ಕೊಳೆಯುತ್ತಿದೆಯಂತೆ. ಬೆಂಗಳೂರಿನ ಗಾರ್ಬೇಜ್ ಸಮಸ್ಯೆ ಅಲ್ಲಿಯೂ ಇರಬಹುದು, ಸಮಾನ ಪಾಪಿಗಳು ಅಂದುಕೊಂಡರೆ ಅಲ್ಲಿ ಸಮಸ್ಯೆ ಇನ್ನೂ ಬಿಗಡಾಯಿಸಿದೆಯಂತೆ. ಆ ಪಟ್ಟಣದ ಮೂಲಕ ಮಲವನ್ನು ಹೊತ್ತೊಯ್ಯುತ್ತಿದ್ದ ಟ್ರೇನ್ ವಿರುದ್ಧ ಅಲ್ಲಿಯ ನಾಗರಿನೊಬ್ಬ ಪ್ರಕರಣ ದಾಖಲಿಸಿದನಂತೆ. ತೀರ್ಪು ನಾಗರಿಕರ ಪರವಾಗೇ ಬಂತು. ಆದರೆ ಟ್ರೇನ್ ಒಯ್ಯುತ್ತಿದ್ದ ವಸ್ತುವನ್ನು ಅಲ್ಲಿಯೇ ಸುರಿಯಲಾಗಿದ್ದು, ಪರಿಸ್ಥಿತಿ ಬಿಗಡಾಯಿಸಿದೆಯಂತೆ. ಹಾದಿಯಲ್ಲಿ ಹೋಗುತ್ತಿದ್ದ ವಾಸನೆ ಮಾರಿಯನ್ನು ಮುಂದೆ ಕಳಿಸದೇ ಮನೆಯೊಳಗೆ ಕರೆದ ಹಾಗಾಯ್ತು.